## ಬುತ್ತಿ ಚಿಗುರು

### ಉಪ್ಪಿಸ್ಟಾ

ಸಂಜೆ ಮಗ– ಸೊಸೆ, ಮಕ್ಕಳೊಂದಿಗೆ ಗಾಂಧೀ ಬಜಾರಿಗೆ ಶಾಪಿಂಗಿಗೆ ಹೋಗಿದ್ದರು. ನರಸಮ್ಮನವರಿಗೆ ಮೊಮ್ಮಕ್ಕಳು ಬರುವಷ್ಟರೊಳಗೆ ಏನಾದ್ರೂ ತಿಂಡಿ ಮಾಡಬೇಕೆನ್ನಿಸಿತು. ಹುಳಿಯವಲಕ್ಕಿ, ಅಕ್ಕಿರೊಟ್ಟಿ, ಗುಗ್ಗರಿ...? ಛೇ! ಈಗಿನ ಮಕ್ಕಳು ಇಂಥವು ಯಾವುದನ್ನೂ ಮುಟ್ಟೋಲ್ಲ. ಏನಿದ್ದರೂ ಅವಕ್ಕೆ ಇಷ್ಟವಾಗೋದು ಇಟಾಲಿಯನ್, ಫ್ರೆಂಚ್ ಮಾತ್ರ. ಏನು ಮಾಡಲಿ ಅಂತ ಅವರು ಮಂಕಾಗಿ ಕುಳಿತರು.

ಥಟ್ಟನೆ ಹ್ಞಾಂ... ಎಂದವರೆ ಮೇಲೆದ್ದು ಅಡುಗೆಮನೆ ಹೊಕ್ಕರು. ಈರುಳ್ಳಿ, ಹಸಿಮೆಣಸಿನ ಕಾಯಿಯನ್ನು ಚಿತ್ರವಿಚಿತ್ರವಾಗಿ ತುಣುಕಾಗಿಸಿದರು. ನಿಂಬೆಹಣ್ಣಿನ ಬದಲು ಹಿತ್ತಲಲ್ಲಿ ಅಪರೂಪವಾಗಿ ಬಿಟ್ಟಿದ್ದ ಹೆರಳೆಕಾಯಿಯನ್ನು ಉದ್ದಕ್ಕೆ ಹೋಳಾಗಿಸಿದರು. ಹತ್ತೇ ನಿಮಿಷದಲ್ಲಿ ಪಾಕ ಸಿದ್ಧಗೊಂಡಿತ್ತು. ಗೇಟು ಸದ್ದಾಯಿತು. ಮೊಮ್ಮಕ್ಕಳು 'ಫೈನ್ ಸ್ಮೆಲ್' ಅನ್ನುತ್ತಾ ಒಳಬಂದರು. ಮಗ, ಸೊಸೆ ಸದ್ಯ ಹೋಟೆಲ್ಲಿನಲ್ಲಿ ತಿನ್ನದಿದ್ದೇ ಒಳ್ಳೆದಾಯ್ತು ಅಂದುಕೊಂಡರು. ನರಸಮ್ಮ ಬಿಸಿಬಿಸಿಯಾಗಿ



ತಿನ್ನೋರಂತೆ ಇರಿ ಅಂತ ಎರಡು ಪಿಂಗಾಣಿ ತಟ್ಟೆಗಳಿಗೆ ತಯಾರಾದ್ದನ್ನು ಬಾಣಲೆಯಿಂದ ವರ್ಗಾಯಿಸಿದರು. ಮೊಮ್ಮಕ್ಕಳು ಕ್ಷಣಾರ್ಧದಲ್ಲಿ ತಟ್ಟೆ ತೊಳೆದಂತೆ ಅದನ್ನು ಉದರಕ್ಕಿಳಿಸಿದ್ದರು. 'ಇದೇನತ್ತೆ ನಿಮ್ಮ ಪವಾಡ' ಅಂತ ಕೇಳಿದಳು ಸೊಸೆ. ನರಸಮ್ಮ ಗುಟ್ಟು ರಟ್ಟು ಮಾಡಿದರು: 'ಏನಿಲ್ಲಮ್ಮ, ನಿನ್ನ ಮಕ್ಕಳು ನಂಗೆ ಗಾಂಧೀ ಬಜಾರ್‌ನಿಂದ್ಲೇ ಮೆಸೇಜ್ ಮಾಡಿದ್ದರು ಏನು ಅಜ್ಜಿ ತಿಂಡಿ ಅಂತ... ಉಪ್ಪಿಸ್ಟಾ ಅಂದಿದ್ದೆ!' ಎಂದರು.

**ಬಿಂಡಿಗನವಿಲೆ ಭಗವಾನ್**

---



ಕಲೆ: ಗಣೇಶ ಆಚಾರ್ಯ

### ಸ್ಪೆಷಲ್ ಹೊಲಿಗೆ!

ಖಾಸಗಿ ಆಸ್ಪತ್ರೆಯೊಂದರಲ್ಲಿ ಶಸ್ತ್ರಚಿಕಿತ್ಸೆಗಾಗಿ ಗುಂಡ ಕೌಂಟರಿನಲ್ಲಿ ಹಣ ಕಟ್ಟುವಾಗ ಗೊತ್ತಿಲ್ಲದೇ, ಹೆಚ್ಚುವರಿಯಾಗಿ ಹತ್ತು ಸಾವಿರ ಜಾಸ್ತಿ ಕಟ್ಟಿಬಿಟ್ಟಿದ್ದ. ಕೌಂಟರಿನವರು ಅದನ್ನು ಇನ್ನು ಏನೂ ಮಾಡಕ್ಕಾಗಲ್ಲ. ನೀವು ಬೇಕಿದ್ರೆ ಡಾಕ್ಟರಿಗೆ ಹೇಳಿ ಎಂದರು.

ಅದನ್ನು ಡಾಕ್ಟರಿಗೆ ತಿಳಿಸಿದಾಗ, ಅವರು 'ಗುಂಡೂರಾವ್, ನೀವೇನೂ ಯೋಚಿಸಬೇಡಿ. ಆಪರೇಷನ್ ಆದಮೇಲೆ, ನಿಮಗೆ ಸಾಧಾರಣ ಹೊಲಿಗೆ ಬದಲು, ಸ್ಪೆಷಲ್ ಎಂಬ್ರಾಯಡರಿ ಹೊಲಿಗೆ ಹಾಕ್ತೇನಿ' ಎಂದಾಗ, ಗುಂಡನಿಗೆ ತಲೆ ತಿರುಗಿತು!

**ವಿ. ವಿಜಯೇಂದ್ರ ರಾವ್**